ಆ) ಕಾರಾವಿ ಯೋಜನೆಯ ವ್ಯಾಪ್ತಿಗೆ ಕೇವಲ 140 ಕಾರ್ಮಿಕರು ಒಳಪಟ್ಟಿದ್ದು, ಇವರಿಗೆ ಈ ಕೆಳಕಂಡ ವೈದ್ಯಕೀಯ ಸೌಲಭ್ಯವನ್ನು ಒದಗಿಸಲಾಗಿದೆ.

1) ಪೂರ್ಣ ಪ್ರಮಾಣದ ವೈದ್ಯಕೀಯ ಸೌಲಭ್ಯವನ್ನು ಒದಗಿಸಲಾಗಿದೆ.

2) ಚಿಕಿತ್ಸಾಲಯಕ್ಕೆ ಅವಶ್ಯಕವಿರುವ ಔಷಧಿಗಳನ್ನು ಸರಬರಾಜು ಮಾಡಲಾಗಿದೆ.

3) ಕೊಳ್ಳೇಗಾಲದ ವಿಮಾದಾರರಿಗೆ ಉತ್ಕೃಷ್ಟ ಸೌಲಭ್ಯವನ್ನು ಒದಗಿಸಲು ಮೈಸೂರಿನ ಖಾಸಗಿ ಆಸ್ಪತ್ರೆಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಲಾಗಿದೆ.

ಇ) ಕಾರಾವಿ ನಿಗಮದ ಮಾರ್ಗಸೂಚಿಯನುಸಾರ 3000 ಕ್ಕಿಂತ ಕಡಿಮೆ ವಿಮಾದಾರರನ್ನು ಹೊಂದಿರುವ ಕಾರಾವಿ ಚಿಕಿತ್ಸಾಲಯಗಳನ್ನು ಪುನರ್ ಸಂಘಟಿಸಬೇಕಾಗಿದ್ದು ಕೊಳ್ಳೇಗಾಲದಲ್ಲಿ ಕಡಿಮೆ ವಿಮಾದಾರರು ಇರುವುದರಿಂದ ಇನ್ಸೂರೆನ್ಸ್ ಮೆಡಿಕಲ್ ಪ್ರಾಕ್ಟೀಷನರ್ ಪದ್ಧತಿಯನ್ನು ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿರುತ್ತದೆ.

2046(3291) ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಾಮರಾಜನಗರ ಜಿಲ್ಲೆ ವ್ಯಾಪ್ತಿಗೆ ಬರುವ ಅರಣ್ಯಗಳ ಒಟ್ಟು ವಿಸ್ತೀರ್ಣ ಎಷ್ಟು;

ಆ) ಅರಣ್ಯವೆಂದು ಗುರುತಿಸಲಾದ ಒತ್ತುವರಿ ಪ್ರಕರಣಗಳು ಎಷ್ಟು (ವಲಯವಾರು, ಕ್ಷೇತ್ರವಾರು ವಿವರ ನೀಡುವುದು);

ಇ) ಅರಣ್ಯದೊಳಗಿರುವ ಗ್ರಾಮ:ಪೋಡುಗಳನ್ನು ಅರಣ್ಯ ಗ್ರಾಮ ಅಥವಾ ಕಂದಾಯ ಗ್ರಾಮಗಳೆಂದು ಘೋಷಿಸಲಾಗಿದೆಯೆ;

ಈ) ಘೋಷಿಸದಿದ್ದಲ್ಲಿ ಕಾರಣಗಳೇನು ಹಾಗೂ ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗುವುದು;

ಉ) ಅರಣ್ಯದೊಳಗಿನ ಗ್ರಾಮಗಳಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಕ್ರಮ ಕೈಗೊಳ್ಳಲಾಗಿದೆಯೆ;

ಊ) ಕೈಗೊಂಡಿದ್ದರೆ, ಸರ್ಕಾರ ಏನು ಕ್ರಮ ಕೈಗೊಂಡಿದೆ; ಇಲ್ಲದಿದ್ದಲ್ಲಿ ಯಾವ ಕ್ರಮವನ್ನು ಕೈಗೊಳ್ಳಲಾಗುವುದು?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ಅರಣ್ಯ ವಿಸ್ತೀರ್ಣ ವಿಭಾಗವಾರು ಈ ಕೆಳಕಂಡಂತಿದೆ:

ಕಾವೇರಿ ವನ್ಯಜೀವಿ ವಿಭಾಗ	52,695.50 ಹೆ.
ಕೊಳ್ಳೇಗಾಲ ವಿಭಾಗ	1,22,230.50 ಹೆ.
ಚಾಮರಾಜನಗರ ವನ್ಯಜೀವಿ ವಿಭಾಗ	56,549.49 ಹೆ.
ಒಟ್ಟು	**2,31,475.49 ಹೆ.**

ಅ) 27–4–1978ರ ಪೂರ್ವಕ್ಕೆ

ಮಲೈಮಹದೇಶ್ವರ ಬೆಟ್ಟ ವನ್ಯಜೀವಿ	274 ಕುಟುಂಬ	444.25 ಹೆ.
ಕೌದಳ್ಳಿ ವನ್ಯಜೀವಿ ವಲಯ	595 ಕುಟುಂಬ	
ಕೊಳ್ಳೇಗಾಲ ತಾ: ರಾಮಪುರ ವಲಯ	50 ಕುಟುಂಬ	64.80 ಹೆ.
ಗುಂಡ್ಲುಪೇಟೆ ವಲಯ	72 ಕುಟುಂಬ	
ಪುಣಜೂನೂರು ವಲಯ	14 ಕುಟುಂಬ	44.22 ಹೆ.
ಕ.ಗುಡಿ ವಲಯ	22 ಕುಟುಂಬ	46.27 ಹೆ.

27–4–1978ರ ನಂತರ

ಕೊಳ್ಳೇಗಾಲ ವಲಯ	5 ಕುಟುಂಬ	4.80 ಹೆ.
ರಾಮಪುರ ವಲಯ	28 ಕುಟುಂಬ	25.11 ಹೆ.
ಗುಂಡ್ಲುಪೇಟೆ ವಲಯ	213 ಕುಟುಂಬ	203 ಹೆ.

ಇ) 1. ಕನಕಪುರ ವನ್ಯ ಜೀವಿ ವಿಭಾಗದಲ್ಲಿ ಬರುವ ಎಲ್ಲಾ ಗ್ರಾಮಗಳನ್ನು ಕಂದಾಯ ಗ್ರಾಮವೆಂದು ಘೋಷಿಸಲಾಗಿದೆ.

2. ಕೊಳ್ಳೇಗಾಲ ವಿಭಾಗದಲ್ಲಿ ಕಂದಾಯ ಗ್ರಾಮಗಳಿಗಾಗಿ ಘೋಷಿಸಲು ಸೂಕ್ತ ಕ್ರಮ ಕೈಗೊಳ್ಳಲು ಜಿಲ್ಲಾಧಿಕಾರಿಗಳು, ಚಾಮರಾಜನಗರ ಇವರನ್ನು ಕೋರಲಾಗಿದೆ.

3. ಚಾಮರಾಜನಗರ ವನ್ಯ ಜೀವಿ ವಿಭಾಗದಲ್ಲಿ 2 ಪೋಡುಗಳು ಕಂದಾಯ ಗ್ರಾಮಗಳೆಂದು ಮತ್ತು 55 ಪೋಡುಗಳು ಕಂದಾಯವಲ್ಲದ ಗ್ರಾಮಗಳಾಗಿರುತ್ತದೆ.

ಈ) ಇಂತಹ ಪ್ರಕರಣಗಳಿರುವುದಿಲ್ಲ.

ಉ) ಚಾಮರಾಜನಗರ ವನ್ಯ ಜೀವಿ ವಿಭಾಗದ ವ್ಯಾಪ್ತಿಯಲ್ಲಿರುವ 57 ಗಿರಿಜನ ಪೋಡುಗಳಿಗೆ ನೀರು, ಶಾಲೆ, ಆರೋಗ್ಯ ಮತ್ತು ಇನ್ನಿತರೆ ಅವಶ್ಯಕ ಸೌಲಭ್ಯಗಳನ್ನು ವನ್ಯ ಜೀವಿ ಕಾಯ್ದೆಯಡಿಯಲ್ಲಿನ ಪರಿಮಿತಿಯೊಳಗೆ ಕಲ್ಪಿಸಲಾಗುತ್ತಿದೆ.

ಊ) ಕಂದಾಯ ಗ್ರಾಮಗಳೆಂದು ಘೋಷಿಸಿದ ನಂತರ ಕಂದಾಯ ಇಲಾಖೆಯವರು ಕ್ರಮ ಕೈಗೊಳ್ಳಬಹುದಾಗಿದೆ.

2047(3292) ಶ್ರೀ ಬಾಲರಾಜ್ ಎಸ್. (ಕೊಳ್ಳೇಗಾಲ): ಮಾನ್ಯ ಉಪ ಮುಖ್ಯಮಂತ್ರಿಗಳು ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2004ನೇ ಸಾಲಿನಲ್ಲಿ ರಾಜ್ಯ ಸರ್ಕಾರದಿಂದ ಚಾಮರಾಜನಗರ ಜಿಲ್ಲೆಗೆ ನಿಗದಿಪಡಿಸಿದ ಯೋಜನಾ ಹಾಗೂ ಯೋಜನೇತರ ವೆಚ್ಚಗಳೆಷ್ಟು (ವಿವರ ನೀಡುವುದು);

ಆ) ಈ ಸಾಲಿಗೆ ನಿಗದಿಪಡಿಸಿರುವ ಹಣ ಎಷ್ಟು; ಬಿಡುಗಡೆ ಮಾಡಿದ ಹಣ ಹಾಗೂ ಖರ್ಚಾದ ಹಣ ಎಷ್ಟು (ಇಲಾಖಾವಾರು ಮತ್ತು ಕ್ಷೇತ್ರವಾರು ವಿವರ ನೀಡುವುದು);